ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ,
ಸಿಂದಗಿ.

ಅಸಲು ದಾವಾ ಸಂ:**118/2024**

ಡಿಡಬ್ಲ್ಯೂ:**4**

| | | |
|---|---|---|
| ಸಾಕ್ಷಿದಾರನ ಹೆಸರು | : | ಮಲ್ಲನಗೌಡ ಪಾಟೀಲ |
| ತಂದೆ ಹೆಸರು | : | ಅಪ್ಪಾಸಾಹೇಬಗೌಡ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಒಕ್ಕುಲತನ |
| ವಾಸ ಸ್ಥಳ | : | ದೇವರಹಿಪ್ಪರಗಿ |

**ದಿನಾಂಕಃ 02.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಪಿ ಎಮ್ ಬಿ ವಕೀಲರಿಂದ ಪ್ರತಿವಾದಿ ನಂಃ1 ರಿಂದ 4 ಪರ ವಕೀಲರಿಂದಃ**

1. ಅಣ್ಣಾರಾಯ ದಾನಪ್ಪಗೌಡ ಪಾಟೀಲ ಎನ್ನುವವರು ನಮ್ಮ ಊರಿನವರು. ಅವರ ಪರಿಚಯ ನನಗೆ ಇದೆ. ಅವರು ಸುಮಾರು 22 ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ. ಅವರಿಗೆ ಇಬ್ಬರು ಹೆಂಡತಿಯರು ಇದ್ದರು. ಮೊದಲನೆ ಹೆಂಡತಿ ಹೆಸರು ಬೋರಮ್ಮ. ಎರಡನೇ ಹೆಂಡತಿಯ ಹೆಸರು ಬೌರಮ್ಮ. 1 ನೇ ಹೆಂಡತಿಯಾದ ಬೋರಮ್ಮರವರಿಗೆ ಮಕ್ಕಳು ಇರಲಿಲ್ಲ. 2 ನೇ ಹೆಂಡತಿಗೆ ಆರು ಜನ ಮಕ್ಕಳು. ಆ ಪೈಕಿ ನಾಲ್ಕು ಹೆಣ್ಣು ಮಕ್ಕಳು, ಎರಡು ಗಂಡು ಮಕ್ಕಳು. ನಾಲ್ಕು ಹೆಣ್ಣು ಜನ ಮಕ್ಕಳ ಪೈಕಿ ಮಂಜುಳಾ ಎನ್ನುವವರು ಅವಿವಾಹಿತರಾಗಿ ಮರಣ ಹೊಂದಿದ್ದಾರೆ.

2. ಅಣ್ಣಾರಾಯರವರು ಮರಣ ಹೊಂದಿದ ನಂತರ ಅವರ ಇಬ್ಬರು ಹೆಂಡತಿಯರು ಅವರ ಆಸ್ತಿಗಳನ್ನು ವಾರಸು ಮಾಡಿಕೊಂಡಿದ್ದರು. ದೇವರಹಿಪ್ಪರಗಿ ಗ್ರಾಮದ ಸ.ನಂಃ147 ರ ಪೈಕಿ 4 ಎಕರೆ ಜಮೀನನ್ನು, ಸ.ನಂಃ607 ರ ಪೈಕಿ 6 ಎಕರೆ ಮತ್ತು ಚಿಲ್ಲರೆ ಗುಂಟೆ ಜಮೀನನ್ನು ವಾರಸ ಮಾಡಿಕೊಂಡಿದ್ದರು. ಅಣ್ಣಾರಾಯರವರು ಒಂದು ಪ್ಲಾಟನ್ನು ತನ್ನ ಹೆಂಡತಿಯ ಹೆಸರನಲ್ಲಿ ಖರೀದಿ ಮಾಡಿದ್ದರು.

3. ವಾರಸಾ ಆದ ನಂತರ ಇಬ್ಬರು ಹೆಂಡತಿಯರ ನಡುವೆ ವಿವಾದ ಉಂಟಾಯಿತು. ಈ ಬಗ್ಗೆ ನಮ್ಮ ಮನೆಯಲ್ಲಿ ನಮ್ಮ ತಂದೆಯವರ ಮುಂದೆ ನ್ಯಾಯ ಪಂಚಾಯತಿ ಆಗಿತ್ತು. ಮೊದಲನೇ ಹೆಂಡತಿಗೆ ಮಕ್ಕಳು ಇಲ್ಲದ ಇರುವುದರಿಂದ ಪಿಂಚಣಿ ಮತ್ತು ನೌಕರಿಯಿಂದ ಬರುವ ಸೌಲಭ್ಯಗಳನ್ನು ಮೊದಲನೇ ಹೆಂಡತಿ ಪಡೆಯಬೇಕೆಂದು, ಎಲ್ಲಾ ಆಸ್ತಿಗಳು ಎರಡನೇ ಹೆಂಡತಿಗೆ ಕೊಡಬೇಕು ಎಂದು ನ್ಯಾಯ ಪಂಚಾಯತಿ ಆಗಿ ಒಪ್ಪಿಕೊಂಡಿದ್ದರು.

4. ಎರಡನೇ ಹೆಂಡತಿಯು ತನ್ನ ಕುಟುಂಬದ ನಿರ್ವಹಣೆ ಮತ್ತು ಹೆಣ್ಣು ಮಕ್ಕಳ ಮದುವೆಗಾಗಿ ಸಾಲ ಮಾಡಿದ್ದು ಸದರಿ ಸಾಲವನ್ನು ಮರುಪಾವತಿಸುವ ಸಲುವಾಗಿ ಪ್ಲಾಟನ್ನು ಸೇಡಬಾಳ ಎನ್ನುವವರಿಗೆ ಒತ್ತಿ ಹಾಕಿದ್ದರು. ಎರಡು ಜಮೀನಿನ ಉತಾರದಲ್ಲಿ ಒಂದನೇ ಹೆಂಡತಿಯ ಹೆಸರು ಇದ್ದು ಅದನ್ನು ಕಡಿಮೆ ಮಾಡಿಕೊಡುವಂತೆ ನಮ್ಮ ಬಳಿ ಬಂದಿದ್ದರು. ಮೊದಲನೇ ಹೆಂಡತಿಯನ್ನು ಲಚ್ಯಾಣದಿಂದ ಕರೆಯಿಸಿದ್ದೇವು. ಅವರನ್ನು ಉಪನೋಂದಾಣಾಧಿಕಾರಿಗಳ ಕಛೇರಿಗೆ ನಾನೇ ಕರೆದುಕೊಂಡು ಬಂದಿರುತ್ತೇನೆ.

5. ಎರಡು ಜಮೀನುಗಳ ಪೈಕಿ ಒಂದು ಜಮೀನಿಗೆ ಪಿಟಿಶೀಟ ಆಗಿರಲಿಲ್ಲ. ಇನ್ನೊಂದು ಜಮೀನಿಗೆ ಪಿಟಿಶೀಟ ಆಗಿತ್ತು. ಪಿಟಿಶೀಟ ಆದ ಜಮೀನಿಗೆ ಬಕ್ಷೀಸ್ ಪತ್ರವನ್ನು, ಪಿಟಿಶೀಟ ಆಗದೆ ಇರುವ ಜಮೀನಿಗೆ ಹಕ್ಕು ಬಿಟ್ಟು ಪತ್ರವನ್ನು ಮಾಡಿಸಿರುತ್ತೇವೆ. ಹೆಣ್ಣು ಮಕ್ಕಳ ಹೆಸರು ಉತಾರದಲ್ಲಿರುವುದರಿಂದ ಸರಕಾರಿ ಸೌಲಭ್ಯ ಪಡೆಯಲು ತೊಂದರೆ ಆಗುತ್ತದೆ ಎಂದು ಎರಡನೇ ಹೆಂಡತಿ ಮಕ್ಕಳು ಹೇಳಿದ್ದರಿಂದ ಎರಡು ಜಮೀನುಗಳಲ್ಲಿ ಎರಡನೇ ಹೆಂಡತಿ ಮತ್ತು ಅವರ ಇಬ್ಬರು

ಗಂಡು ಮಕ್ಕಳ ಹೆಸರು ಮಾತ್ರ ಉತಾರದಲ್ಲಿರುವಂತೆ ಮಾಡಿ ಬಕ್ಷೀಸ್ ಪತ್ರ ಮತ್ತು ಹಕ್ಕು ಬಿಟ್ಟು ಪತ್ರವನ್ನು ಮಾಡಿರುತ್ತೇವೆ.

6. ಸಾಕ್ಷಿಯು ನಿಡಿಃ6 ಬಕ್ಷೀಸ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿಃ6 ಇ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಡಿಃ5 ಹಕ್ಕು ಬಿಟ್ಟು ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿಃ5 ಇ ಎಂದು ಗುರುತಿಸಲಾಯಿತು.

**ಪ್ರತಿವಾದಿ ಪರ ವಕೀಲರು ಮುಖ್ಯ ವಿಚಾರಣೆಗೆ ಕಾಲವಕಾಶ ಕೇಳಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಸಹಿ ಆಗಿದೆ.**

**ಪ್ರಧಾನ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು**

**ಜೆ.ಎಮ್.ಎಫ್.ಸಿ. ಸಿಂದಗಿ**